# ದುಬೈ-ಇಂಡಿಯಾ ಇಂಟರ್‌ನ್ಯಾಷನಲ್ ಅವಾರ್ಡ್ 2024

DUBAI INDIA INTERNATIONAL AWARD 2024

in association with SMARTKEY INTERNATIONAL MARKETING CO. WLL · ಕನ್ನಡಪ್ರಭ · asianet ಸುವರ್ಣ ನ್ಯೂಸ್

## ಪ್ರಶಸ್ತಿ ಪುರಸ್ಕೃತರ ಮಾತುಗಳು



ಈ ಪ್ರಶಸ್ತಿ ನಮ್ಮೆಲ್ಲರ ಜವಾಬ್ದಾರಿ ಹೆಚ್ಚಿಸಿದೆ. ಒಂದು ಪ್ರಶಸ್ತಿ ಸಿಗಬೇಕಾದ್ರೆ ಅದರ ಹಿಂದೆ ಸಾಕಷ್ಟು ಕಷ್ಟಗಳು ಇರುತ್ತವೆ. ಅದನ್ನು ಗುರುತಿಸಿ ಪ್ರಶಸ್ತಿ ನೀಡಿದ್ದಕ್ಕೆ ಕನ್ನಡ ಪ್ರಭ ಹಾಗೂ ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ಧನ್ಯವಾದ ಅರ್ಪಿಸುತ್ತೇನೆ.

- **ಪ್ರೊ. ಶರಣಪ್ಪ ವಿ ಹಲಸೆ** ಉಪಕುಲಪತಿಗಳು, KSOU, ಮೈಸೂರು



ಸಾಧನೆಗೆ ಕೊನೆ ಇಲ್ಲ. ಕೊನೇ ಉಸಿರಿರುವವರೆಗೂ ನಮ್ಮ ನಾಡು, ನುಡಿ, ಜಲ, ಭಾಷೆ , ದೇಶಕ್ಕೋಸ್ಕರ ನನ್ನ ಸೇವೆ ಕೊನೆಯವರೆಗೂ ಇದ್ದೇ ಇರುತ್ತದೆ.

- **ಡಾ.ವಿಶ್ವನಾಥ್ ಜಿ ಪಿ** ಸಂಸ್ಥಾಪಕ ರಾಜ್ಯಾಧ್ಯಕ್ಷ, ಕರ್ನಾಟಕ ಪರ ಸಂಘಟನೆಗಳ ಒಕ್ಕೂಟ, ಕರ್ನಾಟಕ ಪ್ರಜಾಶಕ್ತಿ ಸಮಿತಿ, ಆಡಳಿತಾಧಿಕಾರಿ ಬಸವೇಶ್ವರ ಕಾಲೇಜು, ಬೆಂಗಳೂರು



ನನ್ನ ಈ ಎಲ್ಲಾ ಸಾಧನೆಯ ಹಿಂದೆ ನನ್ನ ಪತಿ ಮಹೇಶ್ ದಾಸರ್‌ಅವರು ಬೆನ್ನೆಲುಬಾಗಿ ನಿಂತಿದ್ದಾರೆ. ಹಾಗೂ ನನ್ನ ಈ ಯಶಸ್ಸಿನ ಹಿಂದೆ ನನ್ನ ಪೋಷಕರೂ ಇದ್ದಾರೆ. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನನಗೆ ಸಪೋರ್ಟ್ ಮಾಡಿ ನನ್ನನ್ನು ಈ ಸ್ಥಾನಕ್ಕೆ ಕರೆತಂದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನ್ನ ಈ ಸಾಧನೆಯನ್ನು ಗುರುತಿಸಿ ಪ್ರಶಸ್ತಿ ನೀಡಿದ ಕನ್ನಡ ಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಸಂಸ್ಥೆಗೆ ಧನ್ಯವಾದಗಳು.

- **ಶ್ರೀಮತಿ. ಉಷಾ ಮಹೇಶ್ ದಾಸರ** ಅಧ್ಯಕ್ಷರು, ಗದಗ -ಬೆಟಗೇರಿ ನಗರ ಸಭೆ, ಗದಗ



ನನ್ನ ಈ ಸೇವೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳು.

- **ಶ್ರೀ ಕೆ. ದುರುಗಪ್ಪ** ಚೀಫ್ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟ್ಟಡಗಳು ದಕ್ಷಿಣ ವಲಯ, ಬೆಂಗಳೂರು



27 ವರ್ಷ ದುಬೈನಲ್ಲಿ ಬಿಜಿನೆಸ್ ಮಾಡಿ ಈಗ ಭಾರತಕ್ಕೆ ಬಂದು ಬಿಜಿನೆಸ್ ಮಾಡ್ತಿದ್ದೇನೆ.. ನನ್ನ ಈ ಸೇವೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ಧನ್ಯವಾದಗಳು.

- **ಶ್ರೀ ತನ್ವೀರ್ ಅಹಮದ್** ನಾರ್ಥ್ ಸ್ಟಾರ್ ಟ್ರಕ್ ಬಾಡಿ ಬಿಲ್ಡಿಂಗ್ ಪಂಪ್‌ಹೌಸ್, ಕೆಆರ್‌ಎಸ್ ರಸ್ತೆ, ಮೈಸೂರು



ನನ್ನ ಮೂರು ಕ್ಷೇತ್ರವನ್ನು ಆಯ್ಕೆ ಮಾಡಿ ಪ್ರಶಸ್ತಿಯನ್ನು ನೀಡಿದ್ದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಬಡ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ನಮ್ಮ ಗುರಿ. ಕೌರವ ಪ್ರೊಡಕ್ಷನ್ ಹೌಸ್ ಜತೆ ರಾಜಕೀಯ ಕ್ಷೇತ್ರದಲ್ಲೂ ಗುರುತಿಸಿಕೊಂಡಿದ್ದೇನೆ.

- **ಸೃಷ್ಟಿ ಪಾಟೀಲ್** ಉಪಾಧ್ಯಕ್ಷರು, ಕೌರವ ಶಿಕ್ಷಣ ಸಂಸ್ಥೆ, ನಿರ್ಮಾಪಕರು ಕೌರವ ನಿರ್ಮಾಣ ಸಂಸ್ಥೆ, ಜಿಲ್ಲಾಧ್ಯಕ್ಷೆ,ಬಿಜೆಪಿ ಮಹಿಳಾ ಮೋರ್ಚಾ



ರವಿ ಕಾಣದ್ದನ್ನು ಕವಿ ಕಂಡ ಎಂಬ ಮಾತಿದೆ. ಅದರಂತೆ ಯಾರಿಗೂ ಕಾಣದಂತಹ ನಮ್ಮ ಪ್ರತಿಭೆಯನ್ನು ಗುರುತಿಸಿ, ದುಬೈನಲ್ಲಿ ಪ್ರಶಸ್ತಿಯ ನೀಡಿ ಪುರಸ್ಕರಿಸಿದ ಕನ್ನಡಪ್ರಭ, ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ಧನ್ಯವಾದಗಳು.

- **ಶೆಡ್ತಿಕೆರೆ ಅಶೋಕ್** ಮಾಲೀಕರು, ಸುಪ್ರಿಯ ಟ್ರೇಡರ್ಸ್, ಶಿವಮೊಗ್ಗ



ಇದು ಭಾರತ ಮತ್ತು ದುಬೈನ ಸ್ನೇಹದ ಸಂದೇಶವಾಗಿ ನಡೆಸಿರುವಂತಹ ಪ್ರಶಸ್ತಿ ಪ್ರದಾನ ಕಾರ್ಯಕ್ರಮ. ಈ ಪ್ರಶಸ್ತಿಯನ್ನು ಪಡೆಯುತ್ತಿರುವುದಕ್ಕೆ ನನಗೆ ತುಂಬಾ ಹೆಮ್ಮೆ ಅನ್ನಿಸುತ್ತಿದೆ.

- **ಶ್ರೀ ಡಾ.ಅಪ್ಪಾಜಿ ಗೌಡ** ಅಧ್ಯಕ್ಷರು ವಿಜಯ ನೇತ್ರಾಲಯ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರು



ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ನನ್ನ ಹಾಗೂ ನಮ್ಮ ಸಂಸ್ಥೆಯ ಸೇವೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳು.

- **ಶ್ರೀ ಸೋಮಶೇಖರ ನಾಯಕ್ ಬಿ. ವಿ.** ಎಂಡಿ, ವಿದ್ವತ್ ಇನ್ಫ್ರಾ ಪ್ರೈ ಲಿ ಮೈಸೂರು



ಟೂರ್ಸ್ ಅಂಡ್ ಟ್ರಾವೆಲ್ಸ್ ಕ್ಷೇತ್ರದಲ್ಲಿ ನನ್ನ ಸೇವೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳು.

- **ಶ್ರೀ ಎಂ. ಅರುಣ್ ಕುಮಾರ್** ಮ್ಯಾನೇಜಿಂಗ್ ಡೈರೆಕ್ಟರ್, ಸಾಯಿ ಶುಭ್ ಟೂರ್ಸ್, ಬೆಂಗಳೂರು



ನಮ್ಮಂತಹ ಸಾಮಾನ್ಯರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿರುವ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳು. ನನ್ನ ಈ ಯಶಸ್ಸಿನ ಹಿಂದೆ ನನ್ನ ಧರ್ಮಪತ್ನಿ ಅವರ ಪಾತ್ರ ಹೆಚ್ಚಾಗಿದೆ ಅವರಿಗೂ ಧನ್ಯವಾದಗಳು.

- **ಶ್ರೀ ನಾಗರಾಜ ಶೆಟ್ಟಿ ಡಿ.ವಿ** ಕಾರ್ಯದರ್ಶಿ, ಯುರೋ ಕಿಡ್ಸ್ ಯುರೋ ಶಾಲೆ



ಎಲೆಮರೆಯ ಕಾಯಿಯಂತ ಪ್ರತಿಭೆಗಳನ್ನು ಗುರುತಿಸಿ ಇಂಟರ್ ನ್ಯಾಷನಲ್ ಮಟ್ಟದಲ್ಲಿ ಪ್ರಶಸ್ತಿ ನೀಡಿರುವುದಕ್ಕೆ ಧನ್ಯವಾದ. ಹೆಣ್ಣು ಮನಸ್ಸು ಮಾಡಿದರೆ ಏನನ್ನು ಬೇಕಾದರು ಸಾಧಿಸಬಹುದು. ಆದ್ರೆ ಕುಟುಂಬದ ಸಪೋರ್ಟ್ ಅಗತ್ಯ. ನನ್ನ ಯಶಸ್ಸಿನ ಹಿಂದೆ ನನ್ನ ಪತಿ ಇದ್ದಾರೆ.

- **ಡಾ. ಭವ್ಯ ಶೇಖರ್** ಸಂಸ್ಥಾಪಕರು & CEO, ಬೃಂದಾ ಸಮೂಹ ಸಂಸ್ಥೆ, ದಮ್ಮೂರು



Success is temporary growth is permanent ಕನ್ನಡ ಪ್ರಭ ಹಾಗೂ ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆ ನೀಡಿದ ಈ ಪ್ರಶಸ್ತಿಯನ್ನು ಸ್ವೀಕರಿಸಿರುವುದು ನನಗೆ ತುಂಬಾ ಸಂತೋಷವಾಗಿದೆ.

- **ಭರತ್ ಕುಮಾರ್** ಎಂಡಿ, ಬೆನಕ ಗೋಲ್ಡ್ ಕಂಪೆನಿ, ಬೆಂಗಳೂರು



2 ವರ್ಷಗಳಿಂದ ದುಬೈನಲ್ಲಿ ನಮ್ಮ ಕಂಪನಿ ಬ್ರ್ಯಾಂಚ್ ಆಫೀಸ್ ಶುರುಮಾಡ ಬೇಕು ಎಂದುಕೊಂಡಿದ್ದೆ ಅದು ಸಾಧ್ಯವಾಗ್ತಿರಲಿಲ್ಲ. ಆದರೆ ಕನ್ನಡ ಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆ ಈ ಪ್ರಶಸ್ತಿ ಮೂಲಕ ನನಗೆ ಬೇಕಾದ ಎಲ್ಲಾ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ.

- **ಶ್ರೀ ಎಚ್. ರಾಜುಗೌಡ** ಎಂಡಿ, ಇಕೋ ಪ್ಲಾನೆಟ್ ಎಲಿವೇಟರ್ ಲಿ, ಬೆಂಗಳೂರು



ಪ್ರಯತ್ನ ಮಾಡಿದರೆ ಮನುಷ್ಯನಿಗೆ ಫಲ ಇದ್ದೇ ಇರುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ನನ್ನ ಸೇವೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳು.

- **ಶ್ರೀ ಬಸವರಾಜ ಬಸವಲಿಂಗಪ್ಪ ಖೋತ** ಅಧ್ಯಕ್ಷ, ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘ



ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ನನ್ನ ಹಾಗೂ ನಮ್ಮ ಸಂಸ್ಥೆಯ ಸೇವೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳು.

- **ಶ್ರೀ ನಾಗರಾಜ್ ಜಯರಾಮ್** ಮ್ಯಾನೇಜಿಂಗ್ ಡೈರೆಕ್ಟರ್, ಜನಸೇನಾ ಪ್ರಾಪರ್ಟೀಸ್ ಪ್ರೈ ಲಿ



ಶಿಕ್ಷಣ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ನನ್ನ ಸೇವೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳು.

- **ಶ್ರೀ ಪಿ. ರಾಮಲಿಂಗ ರೆಡ್ಡಿ** ಅಧ್ಯಕ್ಷರು, ಅರ್ಜುನ ಎಜುಕೇಷನಲ್ ಟ್ರಸ್ಟ್,ಮಂಡ್ಯ ಮಾಲೀಕರು, ಎಸ್ ವಿ ಪವರ್ ಸಲ್ಯೂಷನ್ಸ್



ತಂದೆ ತಾಯಿ ಕನಸನ್ನು ಯಾರು ನನಸು ಮಾಡುತ್ತಾರೋ, ಅವರು ಇಡೀ ಜಗತ್ತಿನಲ್ಲಿ ಎಲ್ಲಿ ಬೇಕಾದರೂ ಸಾಧನೆ ಮಾಡಬಹುದು. ನನಗೆ ಈ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದ ಕನ್ನಡ ಪ್ರಭ ಹಾಗೂ ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

- **ಇಮಾಮ್ಸಾಬ್ ಮುಕ್ತಂಸಾಬ್ ಮೊರಾ ಬಾದ್** ಪ್ರೊಪ್ರೈಟರ್, ಸಾಯಿರಾ ಡೆವಲಪರ್ಸ್



ನಶಿಸಿ ಹೋಗುತ್ತಿರುವ ಹಳೆಯ ಕೃಷಿ ಸಾಮಾಗ್ರಿಗಳು, ಪಳಯುಳಿಕೆಗಳನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೆ ಗೊತ್ತುಪಡಿಸಲು ಪ್ರದರ್ಶನ ಕಾರ್ಯಕ್ರಮ ಮಾಡುತ್ತಿದ್ದೇನೆ. ಪರಿಸರ ಉಳಿಸೋಣ, ಗಿಡ ಮರಗಳನ್ನ ಬೆಳೆಸೋಣ, ಹಕ್ಕಿ ಪಕ್ಷಿಗಳ ಜೀವ ಉಳಿಸೋಣ.

- **ಮಲ್ಲಯ್ಯ ಗುರುಬಸಪ್ಪನ ಮಠ** ಕೃಷಿಕರು, ಮುನ್ಸಿಪಲ್ ಸದಸ್ಯರು, ಗದಗ



ವೈದ್ಯಕೀಯ ಕ್ಷೇತ್ರದಲ್ಲಿ ನನ್ನ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳು. ಈ ಪ್ರಶಸ್ತಿಯನ್ನು ನಾನು ನನ್ನ ಪೋಷಕರು, ನನ್ನ ಪತ್ನಿ ಹಾಗೂ ನನ್ನ ತಾಳ್ಮೆಗೆ ಅರ್ಪಿಸುತ್ತೇನೆ..

- **ಶ್ರೀ ಡಾ. ಶ್ರೀನಿವಾಸ ಎನ್** ಸಹಾಯಕ ಪ್ರಾಧ್ಯಾಪಕ, ವಿಮ್ಸ್, ಬಳ್ಳಾರಿ



ಷೇರು ಮಾರುಕಟ್ಟೆ ವ್ಯಾಪಾರ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನನ್ನ ಸೇವೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳು.

- **ಶ್ರೀ ಆಂಜನೇಯ ಮನೋಜ್ ಕುಮಾರ್** ಮ್ಯಾನೇಜಿಂಗ್ ಡೈರೆಕ್ಟರ್ ಟಿ ಡಿ ಅಕಾಡೆಮಿ ಬೆಂಗಳೂರು



ಸಾರ್ವಜನಿಕ ಸೇವೆ ಕ್ಷೇತ್ರದಲ್ಲಿ ನನ್ನ ಸೇವೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ಧನ್ಯವಾದಗಳು.

- **ಶ್ರೀ ವಿಜಯ್ ಸಾದಯ್ಯ ಹಿರೇಮಠ** ಸಹಾಯಕ ಎಕ್ಸಿಕ್ಯೂಟಿವ್ ಇಂಜಿನಿಯರ್, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್‌ಡೆವಲೆಪ್ಮೆಂಟ್ ಲಿ (KRIDL) ವಿಜಯಪುರ ಉಪವಿಭಾಗ



ನಾನು ಮಾಡಿದ ಉತ್ತಮ ಕಾರ್ಯವನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಂಸ್ಥೆಗೆ ಧನ್ಯವಾದಗಳು. ಇದರಿಂದ ಮುಂದೆ ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಮತ್ತಷ್ಟು ತೊಡಗಿಸಿಕೊಳ್ಳಲು ಪ್ರೇರಣೆ ಸಿಕ್ಕಿದೆ.

- **ಶ್ರೀಕಾಂತ್ ಶೆಟ್ಟಿ ವಂಡಾರ** PWD , CLASS -1 ಕಂಟ್ರಾಕ್ಟರ್ ಮಾರ್ವಿ ಹೆಬ್ಬರಡಿ, ಉಡುಪಿ

## ಸುದ್ದಿ ಸಿಂಚನ

### ಫ್ರೀ ವಿದ್ಯುತ್: ಸಂಕಷ್ಟ

↙ ಮೊದಲ ಪುಟದಿಂದ

ಅವರು ಪಂಜಾಬ್ ಹೆಸರು ಪ್ರಸ್ತಾಪಿಸಿ ಈ ಎಚ್ಚರಿಕೆ ನೀಡಿದ್ದರೂ, ಕರ್ನಾಟಕ ಕೂಡ ಜನರಿಗೆ ಉಚಿತ ವಿದ್ಯುತ್ ನೀಡುತ್ತಿರುವುದರಿಂದ ಕರ್ನಾಟಕಕ್ಕೂ ಅವರು ಪರೋಕ್ಷ ಎಚ್ಚರಿಕೆ ನೀಡಿದಂತಾಗಿದೆ. 'ಬೇರೆಲ್ಲಾ ಉತ್ಪನ್ನಗಳಂತೆ ವಿದ್ಯುತ್ ತಯಾರಿಸಲು ಕೂಡ ಹಣ ಬೇಕು. ಜನರಿಗೆ ಅದನ್ನು ಯಾವುದೇ ರಾಜ್ಯ ಸರ್ಕಾರ ಉಚಿತವಾಗಿ ನೀಡುತ್ತದೆಯಾದರೆ ಅಷ್ಟು ಹಣ ರಾಜ್ಯ ಸರ್ಕಾರದ ಬಳಿಯೇ ಇರಬೇಕು. ವಿದ್ಯುತ್ ಉಚಿತವಲ್ಲ ಎಂದು ನಾನು ರಾಜ್ಯಗಳಿಗೆ ಹೇಳುತ್ತಲೇ ಬಂದಿದ್ದೇನೆ. ಆದರೂ ಅವು ವಿದ್ಯುತ್ತನ್ನು ಉಚಿತವಾಗಿ ನೀಡುತ್ತವೆಯಾದರೆ ಅದಕ್ಕೆ ಬೆಲೆ ತೆರಬೇಕಾಗುತ್ತದೆ' ಎಂದು ತೀಕ್ಷ್ಣವಾಗಿ ಹೇಳಿದ್ದಾರೆ. ಈಗಾಗಲೇ ಸಾಲದಲ್ಲಿರುವ ರಾಜ್ಯಗಳು ಉಚಿತ ವಿದ್ಯುತ್‌ನಂತಹ ಜನಪ್ರಿಯ ಯೋಜನೆಗಳಿಗಾಗಿ ಇನ್ನಷ್ಟು ಸಾಲ ಮಾಡುತ್ತಿವೆ. ಹೀಗೆ ಸಾಲದ ಸುಳಿಗೆ ರಾಜ್ಯವನ್ನು ಸಿಲುಕಿಸಬಾರದು. ಉಚಿತಗಳಿಂದಾಗಿಯೇ ಅನೇಕ ರಾಜ್ಯ ಸರ್ಕಾರಗಳು ಸಾಲದ ಸುಳಿಯಲ್ಲಿ ಸಿಲುಕುತ್ತಿವೆ ಎಂದೂ ಅಭಿಪ್ರಾಯಪಟ್ಟಿದ್ದಾರೆ.

### ಇಸ್ರೇಲ್ ಕದನಕ್ಕೆ 6 ತಿಂಗಳು

↙ ಮೊದಲ ಪುಟದಿಂದ

**ಏನಾಗಿತ್ತು?:** ಕಳೆದ ವರ್ಷದ ಅ.7ರಂದು ಹಮಾಸ್ ಉಗ್ರರು ಏಕಾಏಕಿ ಇಸ್ರೇಲ್‌ನ ಗಡಿಭಾಗದ ನಗರದೊಳಗೆ ನುಗ್ಗಿ ಭೀಕರ ಹತ್ಯಾಕಾಂಡ ನಡೆಸಿದ್ದರು. ಈ ವೇಳೆ 1170 ಇಸ್ರೇಲಿಗಳು ಮತ್ತು ವಿದೇಶಿಯರು ಸಾವನ್ನಪ್ಪಿದ್ದರು. ಅದಾದ ಬಳಿಕ ಹಮಾಸ್ ಉಗ್ರರ ನೆಲೆಯಾದ ಗಾಜಾಪಟ್ಟಿ ಪ್ರದೇಶದ ಮೇಲೆ ಸತತ 6 ತಿಂಗಳಿನಿಂದ ದಾಳಿ ನಡೆಸುತ್ತಿರುವ ಇಸ್ರೇಲಿ ಸೇನೆ, ಆ ಪ್ರದೇಶವನ್ನು ಅಕ್ಷರಶಃ ನೆಲಸಮ ಮಾಡಿದೆ. ಗಾಜಾಪಟ್ಟಿಯ ಬಹುತೇಕ ಕಟ್ಟಡಗಳು ನೆಲಸಮವಾಗಿದ್ದು, ವಾಸಕ್ಕೆ ಅಯೋಗ್ಯ ಸ್ಥಿತಿ ತಲುಪಿವೆ. ಕಳೆದ 6 ತಿಂಗಳ ಅವಧಿಯಲ್ಲಿ ಎರಡೂ ಬಣಗಳು ಪರಸ್ಪರ 10 ಸಾವಿರಕ್ಕೂ ಹೆಚ್ಚು ರಾಕೆಟ್‌ಗಳನ್ನು ಬಳಸಿ ದಾಳಿ ನಡೆಸಿವೆ. ಮತ್ತೊಂದೆಡೆ ಇಸ್ರೇಲ್ ಕಡೆ 1200ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರೆ, ಗಾಜಾಪಟ್ಟಿ ಪ್ರದೇಶದಲ್ಲಿ 33,500ಕ್ಕೂ ಹೆಚ್ಚು ಪ್ಯಾಲೆಸ್ತೀನಿಯರು ಬಲಿಯಾಗಿದ್ದಾರೆ. ಇವರಲ್ಲಿ ಬಹುತೇಕರು ಮಹಿಳೆಯರು ಮತ್ತು ಮಕ್ಕಳು ಎಂದು ರಕ್ಷಣಾ ಕಾರ್ಯಕರ್ತರು ಅಂದಾಜಿಸಿದ್ದಾರೆ.

### ಸಂಪತ್ತು ಹಂಚಿಕೆಗೆ ಸರ್ವೆ

↙ ಮೊದಲ ಪುಟದಿಂದ

ಅದಾದ ಬಳಿಕ ಸಂಪತ್ತಿನ ಹಂಚಿಕೆ ಅರಿಯಲು ಆರ್ಥಿಕ ಮತ್ತು ಸಾಂಸ್ಥಿಕ ಸಮೀಕ್ಷೆ ನಡೆಸುತ್ತವೆ. ಎಲ್ಲಾ ವಲಯಗಳಲ್ಲೂ ಎಲ್ಲಾ ಸಮುದಾಯಕ್ಕೂ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಳ್ಳುತ್ತೇವೆ, ಈ ಮೂಲಕ ಜನರಿಗೆ ಅವರ ಹಕ್ಕುಗಳನ್ನು ಕಲ್ಪಿಸುತ್ತೇವೆ' ಎಂದು ಭರವಸೆ ನೀಡಿದರು. ಇದೇ ವೇಳೆ ಎಸ್‌ಸಿ, ಎಸ್ಟಿ ಮತ್ತು ಒಬಿಸಿ ಸಮುದಾಯ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.90ರಷ್ಟು ಪಾಲು ಹೊಂದಿದೆ. ಆದರೆ ಶೇ.90ರಷ್ಟು ಪಾಲು ಹೊಂದಿರುವ ಜನರಿಗೆ ಅವರ ಪಾಲಿನ ಉದ್ಯೋಗದ ಹಕ್ಕು ಸಿಕ್ಕಿಲ್ಲ. ಎಲ್ಲೂ ಅವರು ಉದ್ಯೋಗದಲ್ಲಿರುವುದು ಕಂಡುಬರುವುದಿಲ್ಲ. ದೇಶದ ಆಡಳಿತವನ್ನು ನಡೆಸುವ 90 ಐಎಎಸ್ ಅಧಿಕಾರಿಗಳಿದ್ದಾರೆ. ಈ ಪೈಕಿ ಮೂವರು ಮಾತ್ರವೇ ಒಬಿಸಿ ಸಮುದಾಯಕ್ಕೆ ಸೇರಿದವರು, ಒಬ್ಬರು ಆದಿವಾಸಿ ಮತ್ತು ಮೂವರು ದಲಿತರು ಎಂದು ಅಂಕಿ- ಅಂಶ ನೀಡಿದರು.

# ಬಿಜೆಪಿ ಸೋಲಿಸಲು ಒಂದೇ ಕಡೆ ಎಡಪಕ್ಷ ಸ್ಪರ್ಧೆ!

## ಮತ ವಿಭಜನೆ ತಡೆಯಲು ಈ ನಡೆ | ಚಿಕ್ಕಬಳ್ಳಾಪುರದಿಂದ ಸಿಪಿಎಂ ಅಭ್ಯರ್ಥಿ ಕಣಕ್ಕೆ

- **ಸಂದೀಪ್ ವಾಗ್ಲೆ**

**ಕನ್ನಡಪ್ರಭ ವಾರ್ತೆ** ಮಂಗಳೂರು

2019ರ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರನ್ನೇ ಸೋಲಿನ ದವಡೆಗೆ ಸಿಲುಕಿಸಿ ಗಮನ ಸೆಳೆದಿದ್ದ ಸಿಪಿಐ ಈ ಬಾರಿ ಇಡೀ ರಾಜ್ಯದಲ್ಲಿ ಯಾವೊಂದು ಕ್ಷೇತ್ರದಲ್ಲೂ ಸ್ಪರ್ಧಿಸದೆ ಶಸ್ತ್ರತ್ಯಾಗ ಮಾಡಿದ್ದರೆ, ಮತ್ತೊಂದು ಎಡಪಕ್ಷ ಸಿಪಿಎಂ ಒಂದೇ ಒಂದು ಕಡೆ ಸ್ಪರ್ಧೆಗೆ ಅಣಿಯಾಗಿದೆ. ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಸಿಪಿಎಂನ ಜಿಲ್ಲಾ ಕಾರ್ಯದರ್ಶಿ ಮುನಿ ವೆಂಕಟಪ್ಪ ಕಣಕ್ಕಿಳಿಯಲಿದ್ದಾರೆ. ಬಿಜೆಪಿ ಸೋಲಿಸುವ ಒಂದೇ ಉದ್ದೇಶದಿಂದ ಎರಡೂ ಪಕ್ಷಗಳು ಸ್ಪರ್ಧಾ ಕಣದಿಂದ (ಒಂದು ಕ್ಷೇತ್ರ ಹೊರತುಪಡಿಸಿ) ದೂರ ಉಳಿಯಲು ನಿರ್ಧರಿಸಿವೆ!

ತುಮಕೂರು ಲೋಕಸಭಾ ಕ್ಷೇತ್ರದಲ್ಲಿ 2019ರ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಕೇವಲ 13,339 ಮತಗಳ ಅಂತರದಿಂದ ಸೋಲನ್ನು ಅನುಭವಿಸಿದ್ದರು. ಆಗ 17,227 ಮತ ಗಳಿಸಿದ ಸಿಪಿಐ ಅಭ್ಯರ್ಥಿ ಎನ್. ಜಯಣ್ಣ, ದೇವೇಗೌಡರ ಸೋಲಿಗೆ ಪ್ರಮುಖ ಕಾರಣಕರ್ತರಾಗಿದ್ದರು. ಮತ ವಿಭಜನೆಯಿಂದಾಗಿ ಅಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ದಾಖಲಿಸಿದ್ದರು. ಇದನ್ನು ಮನಗಂಡ ಸಿಪಿಐ ಈ ಬಾರಿ ಯಾವೊಂದು ಕ್ಷೇತ್ರದಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿಲ್ಲ.

ಸಿಪಿಎಂ ಕಳೆದ ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರದಲ್ಲಿ ಸ್ಪರ್ಧೆ ಮಾಡಿದ್ದು, 18,648 ಮತ ಗಳಿಸಿತ್ತು. ಸದ್ಯದ ಮಟ್ಟಿಗೆ ರಾಜ್ಯದಲ್ಲಿ ಚಿಕ್ಕಬಳ್ಳಾಪುರದ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಮಾತ್ರ ಸಿಪಿಎಂ ಪ್ರಾಬಲ್ಯ ಕೊಂಚ ಉಳಿದುಕೊಂಡಿರುವುದರಿಂದ ಕ್ಷೇತ್ರ ಉಳಿಸಿಕೊಳ್ಳಲು ಅಲ್ಲಿ ಒಂದೇ ಕಡೆ ಸ್ಪರ್ಧೆಗೆ ಸಿಪಿಎಂ ನಿರ್ಧರಿಸಿದೆ.

> ಚಿಕ್ಕಬಳ್ಳಾಪುರ ಹೊರತುಪಡಿಸಿ ಉಳಿದೆಲ್ಲ ಕ್ಷೇತ್ರಗಳಲ್ಲಿ ಬಿಜೆಪಿ ವಿರುದ್ಧ ಸಮರ ಸಾರಲು, ಅದಕ್ಕಾಗಿ ಪ್ರಬಲ ಎದುರಾಳಿಯಾಗಿರುವ ಕಾಂಗ್ರೆಸ್‌ನ್ನು ಬೆಂಬಲಿಸಲು ಸಿಪಿಎಂ ಪಕ್ಷ ತೀರ್ಮಾನ ಕೈಗೊಂಡಿದೆ. ಬಿಜೆಪಿ ಈ ದೇಶದ ದೊಡ್ಡ ಶತ್ರು. ಕಳೆದ 10 ವರ್ಷಗಳಲ್ಲಿ ಕೋಮು ಭಾವನೆ ಕೆರಳಿಸಿ ಬಿಜೆಪಿ ರಾಜಕಾರಣ ನಡೆಸಿದೆ. ಕಾರ್ಪೊರೇಟ್‌ಗಳಿಗೆ ಸಹಕಾರಿಯಾದರೆ ವಿನಃ ಅಭಿವೃದ್ಧಿ ಮಾಡಿಲ್ಲ. ಬಡವರಿಗೆ ಏನೂ ಪ್ರಯೋಜನವಾಗಿಲ್ಲ. ಬಿಜೆಪಿಯ ಕೋಮು ಧ್ರುವೀಕರಣದಿಂದ ಅಂಥದ್ದೇ ಎಸ್‌ಡಿಪಿಐ ಸೃಷ್ಟಿಯಾಗಿದೆ. ಇದನ್ನೆಲ್ಲ ಕೊನೆಗಾಣಿಸಲು ಬಿಜೆಪಿ ವಿರುದ್ಧ ಸಮರ ಸಾರಿದ್ದೇವೆ.
>
> - **ಯಾದವ ಶೆಟ್ಟಿ,** ದ.ಕ. ಜಿಲ್ಲಾ ಸಿಪಿಎಂ ಕಾರ್ಯದರ್ಶಿ

**'ಕೈ'ಗೆ ಬೆಂಬಲ, ಸ್ವತಂತ್ರ ಪ್ರಚಾರ!:** ಈ ಬಾರಿ ವಿಶೇಷವಾಗಿ ಕೆಂಬಾವುಟದ ಎರಡೂ ಪಕ್ಷಗಳು 'ಇಂಡಿಯಾ' ಒಕ್ಕೂಟಕ್ಕೆ ಸೇರಿದ್ದು, ರಾಜ್ಯದಲ್ಲೂ ಕಾಂಗ್ರೆಸ್‌ಗೆ ನೇರ ಬೆಂಬಲ ಘೋಷಣೆ ಮಾಡುವ ತೀರ್ಮಾನ ಕೈಗೊಂಡಿವೆ. ಆದರೆ, ಕಾಂಗ್ರೆಸ್ ಜತೆ ಸೇರಿ ಪ್ರಚಾರ ಮಾಡುತ್ತಿಲ್ಲ. ಸ್ವತಂತ್ರವಾಗಿ ಪ್ರಚಾರ ಕಾರ್ಯದಲ್ಲಿ ತೊಡಗಿ ಬಿಜೆಪಿ ವಿರುದ್ಧ ಸಮರ ಸಾರಿವೆ.

ಬಿಜೆಪಿಯನ್ನು ಸೋಲಿಸಬೇಕು ಎನ್ನುವುದೇ ನಮ್ಮ ಪಕ್ಷದ ಏಕೈಕ ಗುರಿ. ಆದರೆ ಕಾಂಗ್ರೆಸ್ ಜತೆಗೂಡಿ ಪ್ರಚಾರ ನಡೆಸಲ್ಲ. ಈಗಾಗಲೇ ತಾಲೂಕು ಮಟ್ಟದ ಸಮಾವೇಶಗಳು, ಜಿಲ್ಲಾಮಟ್ಟದ ಕಾರ್ಯಾಗಾರ ನಡೆಸಿದ್ದೇವೆ. ಈಗ ಮನೆ, ಮನೆ ಪ್ರಚಾರ ಕಾರ್ಯದಲ್ಲಿ ಕಾರ್ಯಕರ್ತರು ತೊಡಗಿದ್ದಾರೆ ಎಂದು ದ.ಕ. ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ 'ಕನ್ನಡಪ್ರಭ'ಕ್ಕೆ ತಿಳಿಸಿದರು.

**'ಕತ್ತಿ- ಸುತ್ತಿಗೆ' ಬಲ ಕುಸಿತ:** 1980ರ ದಶಕದವರೆಗೆ ಪ್ರಧಾನವಾಗಿ ದ.ಕ. ಸೇರಿದಂತೆ ಇತರೆಡೆಗಳಲ್ಲಿ ಎಡಪಕ್ಷಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಕಾಂಗ್ರೆಸ್‌ಗೆ ಪ್ರಬಲ ಪೈಪೋಟಿ ನೀಡುತ್ತಿದ್ದವು. 1983ರಲ್ಲಿ ರಾಜ್ಯದಲ್ಲಿ ಎಡಪಕ್ಷಗಳ 6 ಮಂದಿ ಶಾಸಕರಿದ್ದರು. ಕರಾವಳಿಯಿಂದ ಒಟ್ಟು ನಾಲ್ಕು ಮಂದಿ ಎಡಪಕ್ಷಗಳ ಶಾಸಕರು ಆಯ್ಕೆಯಾಗಿದ್ದರು. ಸಿಪಿಐನಿಂದ ಶಾಸಕರಾಗಿದ್ದ ಬಿ.ವಿ. ಕಕ್ಕಿಲ್ಲಾಯರು ರಾಜ್ಯಸಭೆ ಸದಸ್ಯರೂ ಆಗಿದ್ದರು. ಕ್ರಮೇಣ ಕೆಂಬಾವುಟದ ಪ್ರಭಾವ ಕ್ಷೀಣಿಸತೊಡಗಿದ್ದು, ರಾಜ್ಯದಲ್ಲಿ ಕೊನೆಯದಾಗಿ 2004ರಲ್ಲಿ ಬಾಗೇಪಲ್ಲಿ ಕ್ಷೇತ್ರದಿಂದ ಜಿ.ವಿ.ಶ್ರೀರಾಮ ರೆಡ್ಡಿ ಶಾಸಕರಾದದ್ದೇ ಅಂತಿಮ, ನಂತರ ಯಾವ ಚುನಾವಣೆಯಲ್ಲೂ ಎಡಪಕ್ಷಗಳು ರಾಜ್ಯದ ಯಾವ ವಿಧಾನಸಭಾ ಕ್ಷೇತ್ರದಲ್ಲಾಗಲಿ, ಲೋಕಸಭೆಯಲ್ಲಾಗಲಿ ಅಧಿಕಾರ ಸ್ಥಾಪಿಸಿಲ್ಲ.

# ಖರ್ಗೆ ಅವರದ್ದು ತುಕ್ಡೇ ತುಕ್ಡೇ ಗ್ಯಾಂಗ್‌ನ ಮನಸ್ಥಿತಿ: ಮೋದಿ

↙ ಮೊದಲ ಪುಟದಿಂದ

ಬಿಹಾರದಲ್ಲಿ ಭಾನುವಾರ ಲೋಕಸಭೆ ಚುನಾವಣೆಯ ಪ್ರಚಾರ ಸಮಾವೇಶದಲ್ಲಿ ಮಾತನಾಡಿದ ಮೋದಿ, 'ಕಾಂಗ್ರೆಸ್ ಪಕ್ಷದ ಅಧ್ಯಕ್ಷಸ್ಥಾನ ಸಣ್ಣ ಹುದ್ದೆಯಲ್ಲ. ಆದರೆ ಅದರ ಅಧ್ಯಕ್ಷರು 370ನೇ ವಿಧಿಗೂ ರಾಜಸ್ಥಾನಕ್ಕೂ ಏನೂ ಸಂಬಂಧವಿಲ್ಲ ಎಂದುಕೊಂಡಿದ್ದಾರೆ. ಜಮ್ಮು-ಕಾಶ್ಮೀರವು ಭಾರತದ ಭಾಗವಲ್ಲವೇ? ಅವರ ಮನಸ್ಥಿತಿ ತುಕ್ಡೆ ತುಕ್ಡೆ ಗ್ಯಾಂಗ್‌ನ ಮನಸ್ಥಿತಿಯನ್ನು ಹೋಲುತ್ತದೆ' ಎಂದು ವಾಗ್ದಾಳಿ ನಡೆಸಿದರು.

'ರಾಜಸ್ಥಾನ ಹಾಗೂ ಬಿಹಾರದವರೂ ಸೇರಿದಂತೆ ದೇಶದ ಎಲ್ಲೆಡೆಯ ಭದ್ರತಾ ಸಿಬ್ಬಂದಿ ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದಕರ ವಿರುದ್ಧ ಹೋರಾಡುತ್ತಾ ಪ್ರಾಣ ಕಳೆದುಕೊಂಡಿದ್ದಾರೆ. ಅವರ ದೇಹಗಳು ರಾಷ್ಟ್ರಧ್ವಜವನ್ನು ಹೊದ್ದುಕೊಂಡು ಇಲ್ಲಿಗೆ ಬಂದಿವೆ' ಎಂದೂ ಮೋದಿ ಹೇಳಿದರು.

ಇದೇವೇಳೆ ಮೋದಿ ಅವರ ಗ್ಯಾರಂಟಿಗಳನ್ನು ನೋಡಿ ಇಂಡಿಯಾ ಕೂಟ ಹತಾಶೆಗೊಂಡಿದೆ. ಕಾಂಗ್ರೆಸ್ ಸನಾತನ ಧರ್ಮದ ವಿರುದ್ಧ ಇರುವ ಪಕ್ಷ ಎಂದೂ ವಾಗ್ದಾಳಿ ನಡೆಸಿದರು.

**ಡಿ.ಕೆ.ಸುರೇಶ್ ವಿರುದ್ಧ ಮತ್ತೆ ಕಿಡಿ:** ದಕ್ಷಿಣ ಭಾರತದವರು ಪ್ರತ್ಯೇಕ ದೇಶ ಕೇಳಬೇಕಾಗುತ್ತದೆ ಎಂದು ಹೇಳಿದ್ದ ಬೆಂಗಳೂರು ಗ್ರಾಮಾಂತರ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ವಿರುದ್ಧವೂ ಪುನಃ ಪರೋಕ್ಷ ವಾಗ್ದಾಳಿ ನಡೆಸಿದ ಮೋದಿ, 'ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು ಬಹಿರಂಗವಾಗಿ ದಕ್ಷಿಣ ಭಾರತಕ್ಕೆ ಪ್ರತ್ಯೇಕ ದೇಶ ಕೇಳಿದ್ದರು. ಅವರ ಹೇಳಿಕೆಯಿಂದಲೇ ಆ ಪಕ್ಷದ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಬಹುದು' ಎಂದೂ ಕಿಡಿಕಾರಿದರು.

> **ನಾನೇಕೆ ಇಷ್ಟೊಂದು ಪ್ರಚಾರ ಮಾಡುತ್ತೇನೆ?**
>
> ಈ ಬಾರಿ ಬಿಜೆಪಿ 400 ಸೀಟುಗಳಿಗಿಂತ ಹೆಚ್ಚು ಗೆಲ್ಲಲಿದೆ. ಎಲ್ಲಾ ಸಮೀಕ್ಷೆಗಳೂ ಎನ್‌ಡಿಎ ಭರ್ಜರಿ ಜಯಭೇರಿ ಬಾರಿಸಲಿದೆ ಎಂದೇ ಹೇಳಿವೆ. ಆದರೂ ನಾನೇಕೆ ಇಷ್ಟೊಂದು ಪ್ರಚಾರ ಮಾಡುತ್ತಿದ್ದೇನೆ ಎಂದು ಕೆಲವರು ಕೇಳುತ್ತಾರೆ. ಬಿರುದು ಬಾವಲಿಗಳನ್ನು ಧರಿಸಿ ವಿಶ್ರಾಂತಿ ಪಡೆಯುವ ವ್ಯಕ್ತಿ ನಾನಲ್ಲ. ಬಡ ಕುಟುಂಬದಲ್ಲಿ ಹುಟ್ಟಿದ ನಾನು ಈ ದೇಶದಿಂದ ಬಡತನವನ್ನು ಸಂಪೂರ್ಣ ನಿರ್ಮೂಲನೆ ಮಾಡುವವರೆಗೂ ವಿರಮಿಸುವುದಿಲ್ಲ.
>
> - **ನರೇಂದ್ರ ಮೋದಿ,** ಪ್ರಧಾನಿ

# ಬೆಂಗಳೂರು, ಮಂಗ್ಳೂರಲ್ಲಿ 14ಕ್ಕೆ ಪ್ರಧಾನಿ ಮೋದಿ ಶೋ

↙ ಮೊದಲ ಪುಟದಿಂದ

ಮಂಗಳೂರಿನಲ್ಲಿ ಸಾರ್ವಜನಿಕ ಸಮಾವೇಶ ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ರೋಡ್ ಶೋ ನಡೆಸುವ ಕುರಿತಂತೆ ಇನ್ನೂ ರೂಪರೇಷೆ ಸಿದ್ಧವಾಗಿಲ್ಲ. ಇನ್ನೆರಡು ದಿನಗಳಲ್ಲಿ ಅಂತಿಮಗೊಳಿಸಲಾಗುವುದು ಎಂದು ತಿಳಿದು ಬಂದಿದೆ.

ಚುನಾವಣೆಯ ಕಾವು ಏರುವ ಮೊದಲೇ ಮೋದಿ ಅವರು ಮಾ.16ರಂದು ಕಲಬುರಗಿಗೆ ಆಗಮಿಸಿ ಪಕ್ಷದ ಪರ ಸಾರ್ವಜನಿಕ ಸಮಾವೇಶದಲ್ಲಿ ಭಾಗಿಯಾಗಿದ್ದರು. ಅದೇ ದಿನ ಚುನಾವಣಾ ವೇಳಾಪಟ್ಟಿ ಘೋಷಣೆಯಾಯಿತು. ನಂತರ ಮಾ.18ರಂದು ಶಿವಮೊಗ್ಗಕ್ಕೆ ಆಗಮಿಸಿ ಪಕ್ಷದ ಸಮಾವೇಶದಲ್ಲಿ ಭಾಗವಹಿಸಿದ್ದರು. ಆದರೆ, ಆಗಿನ್ನೂ ಚುನಾವಣೆಯ ಕಾವು ಏರಿರಲಿಲ್ಲ. ಅಭ್ಯರ್ಥಿಗಳ ಘೋಷಣೆಯೂ ಪೂರ್ಣ ಪ್ರಮಾಣದಲ್ಲಿ ಆಗಿರಲಿಲ್ಲ.

ಇದೀಗ ಮೊದಲ ಹಂತದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಮುಗಿದಿದ್ದು, ಭರದ ಪ್ರಚಾರ ಆರಂಭವಾಗಿದೆ. ಟಿಕೆಟ್ ಹಂಚಿಕೆ ಕುರಿತಂತೆ ಉಂಟಾಗಿದ್ದ ಗೊಂದಲಗಳೂ ಹೆಚ್ಚೂ ಕಡಮೆ ಅಂತ್ಯವಾಗಿದೆ. ಕಳೆದ ವಾರವಷ್ಟೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಆಗಮಿಸಿ ಪಕ್ಷದ ಹಿರಿಯ ನಾಯಕರ ಸಭೆ ನಡೆಸಿ ಎಲ್ಲ ಗೊಂದಲಗಳಿಗೂ ತೆರೆ ಎಳೆದಿದ್ದರು. ಅಲ್ಲದೆ, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್ ಪರ ರಾಮನಗರ ಜಿಲ್ಲೆ ಚನ್ನಪಟ್ಟಣದಲ್ಲಿ ರೋಡ್ ಶೋ ಕೂಡ ನಡೆಸಿದ್ದರು.

ಈಗ ಪ್ರಧಾನಿ ಮೋದಿ ಅವರು ಪ್ರಚಾರಕ್ಕೆ ಆಗಮಿಸುತ್ತಿರುವುದು ಉಭಯ ಪಕ್ಷಗಳಲ್ಲಿ ಸಾಕಷ್ಟು ಭರವಸೆ ಮೂಡಿಸಿದ್ದು, ಅಭ್ಯರ್ಥಿಗಳು ಹಾಗೂ ಕಾರ್ಯಕರ್ತರಲ್ಲಿ ಹುಮ್ಮಸ್ಸು ಹೆಚ್ಚಿಸುವ ನಿರೀಕ್ಷೆಯಿದೆ.

# ಕಡೂರಿನಲ್ಲಿ ಪ್ರಜ್ವಲ್ ರೇವಣ್ಣ ವಿರುದ್ಧ ಪೋಸ್ಟರ್ ಅಭಿಯಾನ

- **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಹಾಸನ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕಡೂರು ವಿಧಾನಸಭಾ ಕ್ಷೇತ್ರದಲ್ಲಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಪೋಸ್ಟರ್ ಅಭಿಯಾನ ಆರಂಭವಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಈ ಪೋಸ್ಟರ್‌ನಲ್ಲಿ ಹಲವು ಪ್ರಶ್ನೆಗಳನ್ನು ಕೇಳಲಾಗಿದೆ. ಸಂಸದರೇ ಆತ್ಮಸಾಕ್ಷಿಗೆ ಪ್ರಶ್ನೆ ಮಾಡಿಕೊಳ್ಳಿ, ತಾವು ಯಾರ ಬಲದಿಂದ ಸಂಸದರಾಗಿದ್ದು?, ಕಡೂರು ಕ್ಷೇತ್ರಕ್ಕೆ ಎಷ್ಟು ಬಾರಿ ಭೇಟಿ ನೀಡಿದ್ದೀರಿ?, ಸದಾ ಬರಕ್ಕೆ ತುತ್ತಾಗುವ ಕಡೂರಿಗೆ ನಿಮ್ಮ ಮಹತ್ತರ ಕೊಡುಗೆ ಏನು?, ತಮ್ಮ ಸ್ವಾರ್ಥದ ಅಡ್ಜಸ್ಟ್‌ಮೆಂಟ್ ಕುಟುಂಬ ರಾಜಕಾರಣಕ್ಕೆ ಇಲ್ಲಿನ ಕಾರ್ಯಕರ್ತರು ಬಲಿ ಪಶುಗಳಾಗಬೇಕೆ?. ಕೋವಿಡ್ ಸಂದರ್ಭದಲ್ಲಿ ಕಡೂರಿನ ಎಷ್ಟು ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೀರಿ?. ಸಂಸದರಾದ ನಂತರ ಕಡೂರಿಗೆ ಎಷ್ಟು ಬಾರಿ ಬಂದಿದ್ದೀರಿ? ಉತ್ತರಿಸಿ ಎಂದು ಪ್ರಶ್ನೆಗಳನ್ನು ಕೇಳಲಾಗಿದೆ.

# ಮತದಾರರಿಗೆ ಹಂಚುತ್ತಿದ್ದ ಗೀರೈಸ್ ವಶ

**ಹೊಳೆನರಸೀಪುರ:** ತಾಲೂಕಿನ ಅಗ್ರಹಾರ ಗೇಟಿನ ರೈಸ್‌ಮಿಲ್ ಹತ್ತಿರ ಶನಿವಾರ ರಾತ್ರಿ ಅಕ್ರಮವಾಗಿ ಗೀ ರೈಸ್ ಹಾಗೂ ಚಿಕನ್ ಚಾಪ್ಸ್ ವಿತರಿಸುತ್ತಿದ್ದ ಹಿನ್ನಲೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಶನಿವಾರ ರಾತ್ರಿ ಎಫ್‌ಎಸ್‌ಟಿ ತಂಡ ಗಸ್ತಿನಲ್ಲಿರುವಾಗ ಸಾರ್ವಜನಿಕರು ದೂರವಾಣಿ ಮೂಲಕ ಕರೆ ಮಾಡಿ ಅಗ್ರಹಾರ ಗೇಟಿನ ರೈಸ್ ಮಿಲ್ ಹತ್ತಿರ ಗೀರೈಸ್ ಹಾಗೂ ಚಿಕನ್ ವಿತರಿಸುತ್ತಿರುವ ಬಗ್ಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಎಫ್‌ಎಸ್‌ಟಿ ತಂಡ ಹಾಗೂ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿದಾಗ 2 ಪಾತ್ರೆಯಲ್ಲಿ 500 ಜನರಿಗೆ ಆಗುವುಷ್ಟು ಗೀ ರೈಸ್ ಸಂಗ್ರಹಿಸಿದ್ದು ಕಂಡುಬಂದಿದೆ. ಈ ಹಿನ್ನಲೆಯಲ್ಲಿ ಆಹಾರವನ್ನು ನಾಶ ಮಾಡಿ, 2 ದೊಡ್ಡ ಪಾತ್ರೆಗಳು ಹಾಗೂ ಟ್ರ್ಯಾಕ್ಟರ್‌ವಶಕ್ಕೆ ಪಡೆಯಲಾಗಿದೆ.

# ಬರ: ಅನ್ಯಾಯ ಒಪ್ಪಿದ್ದಾರೆ-ಡಿಕೆಶಿ

↙ ಮೊದಲ ಪುಟದಿಂದ

ಬೇರೆ ಅಭ್ಯರ್ಥಿಗಳು ನಮ್ಮಂತೆ ಜನರಿಗೆ ಅಭಯ ನೀಡುವುದಿಲ್ಲ. ಕುಮಾರಸ್ವಾಮಿ ಅವರು ಈಗ ಮೇಕೆದಾಟು, ಮಹದಾಯಿ ಯೋಜನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅಧಿಕಾರ ಇದ್ದಾಗ ಈ ವಿಚಾರದಲ್ಲಿ ಏನೂ ಮಾಡದವರು ಈಗ ಏನು ಮಾಡುತ್ತಾರೆ. ನಾನು ಮೇಕೆದಾಟು ಪಾದಯಾತ್ರೆ ಮಾಡುವಾಗ ಅವರು ಕೊಟ್ಟಿರುವ ಹೇಳಿಕೆ ನೋಡಿ. ನಮ್ಮ ಪಾದಯಾತ್ರೆ ಸಂದರ್ಭದಲ್ಲಿ ಕಬಾಬ್ ತಿನ್ನೋಕೆ ಪಾದಯಾತ್ರೆ ಮಾಡುತ್ತಿದ್ದಾರೆ ಎಂದಿದ್ದ ಕುಮಾರಸ್ವಾಮಿ ಅವರು ಈಗ ಪಾದಯಾತ್ರೆ ಬಗ್ಗೆ ಮಾತಾಡುತ್ತಿದ್ದಾರೆ. ಮಂಡ್ಯಕ್ಕೆ ಬಂದ ನಂತರ ಅವರಿಗೆ ಬಿಸಿ ತಟ್ಟಿರುವಂತೆ ಕಾಣುತ್ತಿದೆ ಎಂದು ತಿರುಗೇಟು ನೀಡಿದರು.

ನಾವು ಹೋರಾಟ ಮಾಡಿದ್ದು ರಾಜ್ಯದ ಜನತೆಗಾಗಿ. ರಾಜಕಾರಣದಲ್ಲಿ ಅದು ನಮ್ಮ ಬದ್ಧತೆ. ಅದನ್ನು ಅವರಿಂದ ಸಹಿಸಲು ಆಗಲಿಲ್ಲ. ಅವರು ಏನಾದರೂ ಮಾಡಿಕೊಳ್ಳಲಿ. ಕಾವೇರಿ ಜಲಾನಯನ ಪ್ರದೇಶದ ಜನರಿಗೆ, ಬೆಂಗಳೂರು ಜನರಿಗೆ ಕುಡಿಯುವ ನೀರು ಪೂರೈಸಲು ನಾನು ನೀರಾವರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಇಲಾಖೆ ಜವಾಬ್ದಾರಿ ತೆಗೆದುಕೊಂಡಿದ್ದೇನೆ. ನಾನು ಕೊಟ್ಟ ಮಾತಿನಂತೆ ನಡೆಯುತ್ತೇನೆ ಎಂದು ಜನರಿಗೆ ನಂಬಿಕೆ ಇದೆ. ಅವರ ನಂಬಿಕೆಗೆ ತಕ್ಕಂತೆ ನಡೆಯುತ್ತೇನೆ. ಇದು ಮತದಾರರಿಗೆ ಮನವರಿಕೆಯಾಗಿದೆ ಎಂದು ತಿಳಿಸಿದರು.

# ಬಂಗಾರಪೇಟೆ: ಆನೆ ದಾಳಿಗೆ ಪೂಜಾರಿ ಬಲಿ



**ಬಂಗಾರಪೇಟೆ:** ಆನೆ ದಾಳಿಗೆ ತಮಿಳುನಾಡು ಮೂಲದ ವ್ಯಕ್ತಿ ಬಲಿಯಾಗಿರುವ ಘಟನೆ ಕೋಲಾರ ಜಿಲ್ಲೆ ಬಂಗಾರಪೇಟೆ ತಾಲೂಕಿನ ಗಡಿ ಭಾಗವಾದ ಮೂತನೂರು ಅರಣ್ಯ ಪ್ರದೇಶದಲ್ಲಿ ನಡೆದಿದೆ. ಮೃತರನ್ನು ಚಿನ್ನಿ ಬೀರಪ್ಪ (68) ಎಂದು ಗುರುತಿಸಲಾಗಿದೆ. ಮೂತನೂರು ಅರಣ್ಯ ಪ್ರದೇಶದಲ್ಲಿರುವ ದೇವಾಲಯದಲ್ಲಿ ಪೂಜೆ ಮುಗಿಸಿಕೊಂಡು ಹಿಂತಿರುಗುತ್ತಿದ್ದ ಬೀರಪ್ಪ ಅವರ ಮೇಲೆ ಎರಡು ಆನೆಗಳು ದಾಳಿ ನಡೆಸಿವೆ. ಆನೆಗಳ ದಾಳಿಯಿಂದಾಗಿ ಬೀರಪ್ಪ ಅವರ ದೇಹ ಗುರುತಿಸಲಾಗದಷ್ಟು ಛಿದ್ರಗೊಂಡಿತ್ತು.